ಅಲ್ಲದೇ, ಮೂರನೇ ಹಂತದ ಸೇತುವೆ ನಿರ್ಮಾಣ ಯೋಜನೆಯಲ್ಲಿ ಕಿ.ಮೀ. 116.80 ರಲ್ಲಿ ರೂ.65.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸೇತುವೆ ನಿರ್ಮಾಣ ಮಾಡಲು ಯೋಜಿಸಿದೆ.

ಈ) ಸೊರಬ ತಾಲ್ಲೂಕು ಹಿರೇಕಲಗೋಡು ಸೇತುವೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ತೆಗೆದುಕೊಳ್ಳಲಾಗುತ್ತಿರುವ ಮೂರನೇ ಹಂತದ ಸೇತುವೆ ನಿರ್ಮಾಣ ಕಾಮಗಾರಿಯಲ್ಲಿ ರೂ. 140.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ ಮತ್ತು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಉ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ 2ನೇ ಹಂತದ ಸೇತುವೆ ನಿರ್ಮಾಣ ಯೋಜನೆಯಲ್ಲಿ, ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 14 ಸೇತುವೆಗಳನ್ನು ರೂ.855 ಲಕ್ಷಗಳ ಅಂದಾಜು ವೆಚ್ಚದಲ್ಲಿ ತೆಗೆದುಕೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

ಅಲ್ಲದೇ, 3ನೇ ಹಂತದ ಸೇತುವೆ ನಿರ್ಮಾಣ ಯೋಜನೆಯಲ್ಲಿ 14 ಸೇತುವೆಗಳನ್ನು ರೂ.1178 ಲಕ್ಷಗಳ ಅಂದಾಜು ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

18, (89) ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ (ಬೆಳ್ಳಾವಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ ಬಡವನ ಹಳ್ಳಿಯಲ್ಲಿ ಪೊಲೀಸ್ ವಿಭಾಗದ ಹೊರ ಚೌಕಿ ಠಾಣೆ (ಔಟ್ ಪೊಲೀಸ್ ಸ್ಟೇಷನ್) ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರ ಮುಂದಿದೆಯೇ?

ಆ) ಈ ಪ್ರಸ್ತಾವನೆ ಸರ್ಕಾರದ ಮುಂದಿದ್ದಲ್ಲಿ ಯಾವಾಗ ಪ್ರಾರಂಭವಾಗಬಹುದು?

ಇ) ಹಾಗಿದ್ದಲ್ಲಿ, ಇದಕ್ಕೆ ಕಾಲಮಿತಿಯನ್ನೇನಾದರೂ ನಿಗಧಿಗೊಳಿಸಿದೆಯೇ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಹೌದು.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

20, (113) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬಸವಕಲ್ಯಾಣದಲ್ಲಿರುವ ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಎಷ್ಟು ಸುವ್ಯವಸ್ಥೆಯಲ್ಲಿವೆ ಹಾಗೂ ಎಷ್ಟು ದುಸ್ಥಿತಿಯಲ್ಲಿವೆ;

ಇ) ಕೆಟ್ಟಿರುವ ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳನ್ನು ದುರಸ್ಥಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಕೆಟ್ಟಿರುವ ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳ ವಿವರಗಳನ್ನು ಗ್ರಾಮವಾರು ವಿವರಗಳನ್ನು ನೀಡುವುದು);

ಈ) ಇವುಗಳು ಎಷ್ಟು ಅವಧಿಯಿಂದ ಕೆಟ್ಟಿವೆ;

ಉ) ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ ಎಷ್ಟನ್ನು ಮೇಲ್ದರ್ಜೆಗೆ ಏರಿಸಲಾಗಿದೆ;

ಊ) ಆಗಾಗ ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳು ಕೆಟ್ಟು ಹೋಗುತ್ತಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು;

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ದಿನಾಂಕ:15–03–2006 ರಲ್ಲಿದ್ದಂತೆ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು ಸಂಖ್ಯೆ 961.

ಆ) ಇವುಗಳಲ್ಲಿ ಒಟ್ಟು 948 ಟ್ರಾನ್ಸ್‌ಫಾರ್ಮರ್‌ಗಳು ಸುವ್ಯವಸ್ಥೆಯಲ್ಲಿದ್ದು, 13 ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಂಡಿದ್ದು, ದುರಸ್ತಿಯಲ್ಲಿರುತ್ತವೆ.

ಇ) ಕೆಟ್ಟಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಲು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಪ್ರತಿಯೊಂದು ವಿಭಾಗ ಮಟ್ಟದಲ್ಲಿಯೂ ಒಂದು ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಒಟ್ಟು 7 ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರತಿಯೊಂದು ದುರಸ್ತಿ ಕೇಂದ್ರದಲ್ಲಿಯೂ ವಿಭಾಗ ವ್ಯಾಪ್ತಿಯಲ್ಲಿ ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಲಾಗುತ್ತದೆ. ತಿಂಗಳಿಗೆ ಸುಮಾರು 75 ರಿಂದ 80 ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಮಾಡಲಾಗುತ್ತದೆ. ಬಸವಕಲ್ಯಾಣ ಬೀದರ್ ವಿಭಾಗಕ್ಕೆ ಒಳಪಟ್ಟಿದ್ದು, ಬೀದರ್ ವಿಭಾಗದಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರವು ಕಾರ್ಯನಿರ್ವಹಿಸುತ್ತಿದ್ದು, ಬಸವಕಲ್ಯಾಣ ವ್ಯಾಪ್ತಿಯಲ್ಲಿ ವಿಫಲಗೊಂಡ

ಟ್ರಾನ್ಸ್ ಫಾರ್ಮರ್‌ಗಳನ್ನು ಈ ಕೇಂದ್ರದಲ್ಲಿ ದುರಸ್ತಿಗೊಳಿಸಲಾಗುತ್ತಿದೆ. ದಿನಾಂಕ : 15–03–2006 ರಲ್ಲಿದ್ದಂತೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳ ಗ್ರಾಮವಾರು ವಿವರ ಈ ಕೆಳಕಂಡಂತಿದೆ.

ಗ್ರಾಮದ ಹೆಸರು	ವಿಫಲಗೊಂಡ ಟ್ರಾನ್ಸ್ ಫಾರ್ಮರ್‌ನ ಸಾಮರ್ಥ್ಯ	ಸಂಖ್ಯೆ
1. ಹತ್ಯಾಳ	63 ಕೆ.ವಿ.ಎ.	2
2. ಜಾಜನಮುಗಳಿ	25 ಕೆ.ವಿ.ಎ.	1
3. ಚೌಕಿವಾಡಿ	100 ಕೆ.ವಿ.ಎ.	1
4. ಮಂಠಾಳ	63 ಕೆ.ವಿ.ಎ.	1
5. ಧನ್ನೂರಾ.ಆರ್	100 ಕೆ.ವಿ.ಎ.	1
6. ತೊಗಲೂರ	100 ಕೆ.ವಿ.ಎ.	1
7. ಸುಂಠಾಣ	100 ಕೆ.ವಿ.ಎ.	1
8. ರಾಜೇಶ್ವರ	63 ಕೆ.ವಿ.ಎ.	2
9. ಹಂದ್ರಾಳ.ಕೆ	100 ಕೆ.ವಿ.ಎ.	1
10. ರಾಜೋಳಾ	63 ಕೆ.ವಿ.ಎ.	1
11. ಸಸ್ತಾಪೂರ	63 ಕೆ.ವಿ.ಎ.	1
	ಒಟ್ಟು	13

ಈ) ಈ ಟ್ರಾನ್ಸ್‌ಫಾರ್ಮರ್‌ಗಳು ಇದೇ ತಿಂಗಳ (ಮಾರ್ಚ್–2006) 8, 9 ಮ್ತು 10ನೇ ತಾರೀಖಿನಂದು ಸುರಿದ ಸತತ ಮಳೆ, ಮಿಂಚು ಹಾಗೂ ಬಿರುಗಾಳಿ ಈ ಕಾರಣಗಳಿಂದ ವಿಫಲಗೊಂಡಿರುತ್ತವೆ.

ಉ) 2003–04 ರಲ್ಲಿ 24 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು, 2004–05ರಲ್ಲಿ 21 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಮತ್ತು 2005–06ನೇ ಸಾಲಿನಲ್ಲಿ (15–03–2006 ರವರೆಗೆ) ಒಟ್ಟು 23 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಮೇಲ್ದರ್ಜೆಗೇರಿಸಲಾಗಿದೆ.

ಊ) ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮುಖ್ಯವಾಗಿ ಓವರ್ ಲೋಡ್, ಪ್ರಕೃತಿ ವಿಕೋಪದಿಂದ (ಮಳೆ/ಬಿರುಗಾಳಿ/ಸಿಡಿಲು), ಮರಗಳು/ಮರದ ರೆಂಬೆಗಳು ವಿದ್ಯುತ್ ಲೈನುಗಳ ಮೇಲೆ ಬಿದ್ದು ಎಲ್.ಟಿ. ಲೈನುಗಳ ಶಾರ್ಟ್ ಸರ್ಕ್ಯೂಟ್, ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಬಳಕೆಯಿಂದಾಗುವ ಓವರ್ ಲೋಡ್ ಈ ಕಾರಣಗಳಿಂದಗಿ ವಿಫಲಗೊಳ್ಳುತ್ತಿರುವುದು ಗಮನಕ್ಕೆ ಬಂದಿರುತ್ತದೆ.

ವಿದ್ಯುತ್ ಪರಿವರ್ತಕಗಳ ಓವರ್ ಲೋಡ್‌ನಿಂದ ಸಂಭವಿಸುವ ವಿಫಲತೆಯನ್ನು ಕಡಿಮೆ ಮಾಡಲು ಈ ಕೆಳಕಂಡ ಯೋಜನೆಗಳಡಿಯಲ್ಲಿ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲಾಗಿದೆ.

1. ಸಿಸ್ಟಂ ಇಂಪ್ರೂವ್‌ಮೆಂಟ್ ಅಡಿಯಲ್ಲಿ ಕಾಲಕಾಲಕ್ಕೆ ಹೆಚ್ಚು ವಿದ್ಯುತ್ ಒತ್ತಡವಿರುವ (ಓವರ್ ಲೋಡ್) ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಮೇಲ್ದರ್ಜೆಗೇರಿಸುವ ಅಥವಾ ಹೆಚ್ಚುವರಿಯಾಗಿ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.

2. ಭಾರತ ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ರೂಪಿಸಿದ್ದು, ಇದರಲ್ಲಿ ಬಸವಕಲ್ಯಾಣ ತಾಲ್ಲೂಕು ಸೇರಿದಂತೆ ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಮೂಲಸೌಕರ್ಯಗಳನ್ನು ಒದಗಿಸಲಾಗುವುದು. ಈ ಸಮಯದಲ್ಲಿ ಅವಶ್ಯಕತೆಗೆ ಅನುಗುಣವಾಗಿ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದು.

3. ಬಸವಕಲ್ಯಾಣ ಪಟ್ಟಣದಲ್ಲಿ ಎ.ಪಿ.ಡಿ.ಆರ್.ಪಿ ಯೋಜನೆಯಡಿಯಲ್ಲಿ ಹೆಚ್ಚುವರಿ ವಿರತಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು ಉದ್ದೇಶಿಸಿದೆ.

21, (114) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೀದರ ಜಿಲ್ಲೆಗೆ ಪೌರಾಡಳಿತ ಇಲಾಖೆಯಿಂದ ವಿವಿಧ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಕಳೆದ 3 ವರ್ಷಗಳ ಅವಧಿಯಲ್ಲಿ ಬಿಡುಗಡೆ ಮಾಡಿರುವ ಹಣದ ಮೊತ್ತವೆಷ್ಟು ; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು) ;

ಆ) ಬಸವ ಕಲ್ಯಾಣ ಮುನಿಸಿಪಾಲಿಟಿಗೆ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸುವ ಸಂಬಂಧವಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ ;

ಇ) ಹಾಗಿದ್ದಲ್ಲಿ, ಯಾವಾಗ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು ಮತ್ತು ಇದಕ್ಕೆ ವೆಚ್ಚವಾಗುವ ಹಣವೆಷ್ಟು ;